
# ಮಿಮಿಗೆ ಒಂದು ಹೊಸ ಮನೆ ಸಿಕ್ಕಿತು






ಮಿಸ್ಟರ್. ಫಾಕ್ಸ್‌ನ ದೊಡ್ಡ ಹಳದಿ ಕಾರಿನಲ್ಲಿ ಕಾಡಿನ ಮೂಲಕ ಸಾಗುವಾಗ, ಹೆದರುತ್ತ ಹಾಗೂ ಚಿಂತಿಸುತ್ತಾ ಮಿಮಿ ಕುಳಿತಿದ್ದಳು. "ಹೆದರಬೇಡ. ಮಿಮಿ, ನೀನು ಈಗ ಸುರಕ್ಷಿತವಾಗಿದ್ದೀಯಾ... ನಾನು ನಿನ್ನೊಂದಿಗಿದ್ದೇನೆ. ಹಾಗೂ ನಿನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗಬೇಕೆಂದು ನನಗೆ ಗೊತ್ತಿದೆ" ಎಂದು ಅವನು ಹೇಳಿದ.





ಅಂತಿಮವಾಗಿ ಅವರು ಉದ್ದ ಹಸಿರು ಬಾಗಿಲು ಹಾಗೂ ಸುತ್ತಲೂ ಒಂದು ಬಿಳಿ ಬೇಲಿಯಿರುವ ದೊಡ್ಡ ಮನೆಗೆ ಬಂದು ತಲುಪಿದರು.
ಮಿಮಿಗೆ ಕಿಟಕಿಯಲ್ಲಿ ದೀಪಗಳು ಕಾಣಿಸಿದವು....ಹಾಗೂ ಹೊರಗೆ ದೊಡ್ಡ ಮಾವಿನ ಮರ ಕಾಣಿಸಿತು.ಅವಳಿಗೆ ಇತರ ಪ್ರಾಣಿಗಳು ಆಟ ಆಡುತ್ತಿರುವ ಹಾಗೂ ವಿನೋದವಾಗಿ ಮಾತನಾಡುವ ಶಬ್ದವೂ ಕೇಳಿಸುತ್ತಿತ್ತು.
ಇದು ಯಾವ ಸ್ಥಳ?ಇಲ್ಲಿ ಯಾರು ವಾಸಿಸುತ್ತಾರೆ?ನನಗೆ ಸ್ವರ ಕೇಳುತ್ತಿರುವ ಈ ಎಲ್ಲಾ ಪ್ರಾಣಿಗಳು ಯಾವುವು?ಎಂದು ಅವಳು ಅಚ್ಚರಿಗೊಂಡಳು.




ಮಿಸ್ಟರ್ ಫಾಕ್ಸ್ ಬಾಗಿಲು ಬಡಿದ.
ಆಗ ಒಬ್ಬ ದುಂಡಗೆ, ದಪ್ಪಗೆ, ನಗುಮುಖದ ಕರಡಿ ಬಂದು ಬಾಗಿಲು ತೆರೆದು ಕೇಳಿದಳು,
‘ಹಲೋ, ನಾನು ಮಿಸೆಸ್. ಕರಡಿ...ನನ್ನಿಂದ ಇಂದು ಏನು ಸಹಾಯ ಆಗಬೇಕಾಗಿದೆ?‘
ಮಿಮಿ ತಪ್ಪಿಸಿಕೊಂಡಿದ್ದಾಳೆಂದು ಹಾಗೂ ಅವಳ ತಾಯಿ ಮರಣ ಹೊಂದಿದ್ದಾಳೆ... ಹಾಗೂ ಅವಳನ್ನು ಮಾರುಕಟ್ಟೆಯಲ್ಲಿ ಬಿಟ್ಟ ಅವಳ ತಂದೆ ವಾಪಾಸು ಕರೆದುಕೊಂಡು ಹೋಗಲು ಬರಲಿಲ್ಲವೆಂದು ಮಿಸ್ಟರ್ ಫಾಕ್ಸ್ ಅವಳಿಗೆ ವಿವರಿಸಿದ.






ಮಿಮಿಗೆ ಒಂದು ಅಪ್ಪುಗೆಯನ್ನು ನೀಡುತ್ತಾ, ‘ಓ ನನ್ನ ಮುಗ್ಧ ಮಿಮಿ‘ ಎಂದು ಮಿಸೆಸ್ ಕರಡಿ ಹೇಳಿದಳು.
‘ನೀನು ತುಂಬಾ ಹೆದರಿರಬಹುದಲ್ಲಾ ಹಾಗೂ ನಿನಗೆ ತುಂಬಾ ದುಃಖವೂ ಆಗಿರಬಹುದಲ್ಲವಾ...ತಮ್ಮ ಅಮ್ಮ ಹಾಗೂ ಅಪ್ಪನೂ ದೂರ ಹೋದಾಗ ಅಥವಾ ತಮ್ಮನ್ನು ಬಿಟ್ಟಾಗ ಎಲ್ಲಾ ಚಿಕ್ಕ ಪ್ರಾಣಿಗಳಿಗೆ ತುಂಬಾ ಭಯವಾಗುತ್ತದೆ ಹಾಗೂ ತಳಮಳವಾಗುತ್ತದೆ.‘
‘ಆದರೆ ನಿನಗೆ ನಾವು ಸಿಕ್ಕಿದ್ದೇವೆಂದು ನನಗೆ ತುಂಬಾ ಸಂತೋಷವಾಗುತ್ತಿದೆ....ನೀನು ಈಗ ಸುರಕ್ಷಿತವಾಗಿದ್ದೀಯಾ.ಮೊದಲಿಗೆ ನಾನು ನಿನಗೆ ತಿನ್ನಲು ಏನಾದರೂ ಕೊಡುತ್ತೇನೆ ನಂತರ ನೀನು ಮಲಗುವ ಮೊದಲು ಇತರ ಎಲ್ಲಾ ಚಿಕ್ಕ ಪ್ರಾಣಿಗಳನ್ನು



ಮಿಸ್ಟರ್.ಫಾಕ್ಸ್ ಹೊರಟು ಹೋದ ನಂತರ ಮಿಸೆಸ್. ಕರಡಿ ಮಿಮಿಯನ್ನು ಅಡುಗೆಮನೆಗೆ ಕರೆದುಕೊಂಡು ಹೋದಳು.
ಮಿಸೆಸ್. ಜಿಂಕೆ ಅಡುಗೆಯವಳಿಗೆ "ಹಲೋ" ಎಂದು ಹೇಳಿದಳು. "ನಿನಗೆ ಹಸಿವಾಗಿರಬೇಕು...ಇಲ್ಲಿ ಸ್ವಲ್ಪ ಅನ್ನ ಹಾಗೂ ಸಾಂಬಾರು ಇದೆ...ನಿನಗೆ ಇದು ಇಷ್ಟವಾಗಬಹುದು."
ಇದು ಖಂಡಿತವಾಗಿಯೂ ಅಮ್ಮನ ಅಡುಗೆಯಂತಿಲ್ಲ ಎಂದು ಮಿಮಿಯು ದುಃಖದಿಂದ ಯೋಚಿಸಿದಳು.
ಆದರೆ ಅವಳಿಗೆ ಹಸಿವಾಗಿದ್ದರಿಂದ ಅದನ್ನು ಪೂರ್ತಿಯಾಗಿ ತಿಂದು ಮುಗಿಸಿದಳು.
ಆದರೆ ನಿಜವಾಗಿ, ಅದು ರುಚಿಯಾಗಿಯೇ ಇತ್ತು ಎಂದು ನಂತರ ಮಿಮಿ ಅಂದುಕೊಂಡಳು.




ಮಿಮಿಯು ತಿಂದು ಮುಗಿಸಿದ ನಂತರ, ಮಿಸೆಸ್ ಕರಡಿ ಅವಳನ್ನು ಇತರ ಚಿಕ್ಕ ಪ್ರಾಣಿಗಳು ತುಂಬಿರುವ ಒಂದು ಕೋಣೆಗೆ ಕರೆದುಕೊಂಡು ಹೋದಳು.
ಮಿಮಿಯು ಈ ಹಿಂದೆ ಇಂಥ ತುಂಬಾ ಪ್ರಾಣಿಗಳನ್ನು ನೋಡಿಯೇ ಇಲ್ಲದ್ದರಿಂದ...ಅವಳಿಗೆ ಸ್ವಲ್ಪ ಗಾಬರಿಯಾಯಿತು!




ಅಲ್ಲಿ ಅತಿ ಮಾತುಗಾರನಾದ ಕಿಕಿ ಎಂಬ ಗಿಳಿ ಇದ್ದನು.ಅವನು ಎಲ್ಲರೊಂದಿಗೂ ಮಾತನಾಡಲು ಇಷ್ಟಪಡುತ್ತಿದ್ದನು."ನಮ್ಮ ಮನೆಗೆ ಸ್ವಾಗತ, ಮಿಮಿ."ಎಂದು ಅವನು ಹೇಳಿದನು.






ಹಾಗೂ ತುಂಬಾ ದಯಾಳು ಹಾಗೂ ಎಲ್ಲರಿಗೂ ಸಹಾಯ ಮಾಡಲು ಬಯಸುವ ಟಿಂಗು ಎಂಬ ಜಿಂಕೆ ಇದ್ದಿತು.... "ನಿನಗೆ ಏನಾದರೂ ಬೇಕಿದ್ದಲ್ಲಿ ನನಗೆ ತಿಳಿಸು ಮಿಮಿ."ಎಂದು ಅವಳು ಹೇಳಿದಳು.



ಅಲ್ಲಿ, ಎಲ್ಲರನ್ನೂ ಅಪ್ಪಿಕೊಳ್ಳಲು ಇಷ್ಟಪಡುವ ಬೋಬೋ ಎಂಬ ಕರಡಿ ಮರಿ ಇದ್ದನು.
"ನಾನು ನಿನ್ನನ್ನು ಒಮ್ಮೆ ಅಪ್ಪಿಕೊಳ್ಳಲಾ, ಮಿಮಿ?"ಎಂದು ಅವನು ಕೇಳಿದನು.






ಹಾಗೂ ಇತರ ಪ್ರಾಣಿಗಳ ಬಾಲವನ್ನು (ಯಾರಿಗೆ ಬಾಲವಿತ್ತೋ ಅವರ ಬಾಲ) ಎಳೆಯುವ ತುಂಟ ಹುಲಿಮರಿ ಶೇರೂ ಇದ್ದನು.




ಅಲ್ಲಿ ಒಬ್ಬ ಉತ್ತಮ ಜಿಗಿತಗಾರ ಹಾಗೂ ಮರ ಹತ್ತುವ ಅಳಿಲು ನಾನೂ ಇದ್ದಳು.ಅವಳು ನಾನೂ ಹೇಳಿದ ಎಲ್ಲ ಕೆಲಸವನ್ನೂ ಮಾಡಲು ಇಚ್ಛಿಸುವ ಕೋತಿ ಮೋಮೋಳೊಂದಿಗೆ ಬಹಳ ಒಳ್ಳೆಯ ಸ್ನೇಹದಿಂದ ಇದ್ದಳು."ನೀನು ನಮ್ಮೊಂದಿಗೆ ಆಡಲು ಬರುತ್ತೀಯೆಂದು ನಾವು ಆಸೆಪಡುತ್ತೇವೆ...ನಾವು ಹೊರಗೆ ಮಾವಿನ ಮರವನ್ನು ಹೇಗೆ ಹತ್ತುವುದೆಂದು ನಿನಗೆ ತೋರಿಸುತ್ತೇವೆ!"ಎಂದು ಸಂಭ್ರಮದಿಂದ ಅವು ಮಿಮಿಗೆ ಹೇಳಿದವು.ಅಲ್ಲಿ ಒಬ್ಬ ಉತ್ತಮ ಜಿಗಿತಗಾರ ಹಾಗೂ ಮರ ಹತ್ತುವ ಅಳಿಲು ನಾನೂ ಇದ್ದಳು.ಅವಳು ನಾನೂ ಹೇಳಿದ ಎಲ್ಲ ಕೆಲಸವನ್ನೂ ಮಾಡಲು ಇಚ್ಛಿಸುವ ಕೋತಿ ಮೋಮೋಳೊಂದಿಗೆ ಬಹಳ ಒಳ್ಳೆಯ ಸ್ನೇಹದಿಂದ ಇದ್ದಳು."ನೀನು ನಮ್ಮೊಂದಿಗೆ ಆಡಲು ಬರುತ್ತೀಯೆಂದು ನಾವು ಆಸೆಪಡುತ್ತೇವೆ...ನಾವು ಹೊರಗೆ ಮಾವಿನ ಮರವನ್ನು ಹೇಗೆ ಹತ್ತುವುದೆಂದು ನಿನಗೆ ತೋರಿಸುತ್ತೇವೆ!"ಎಂದು ಸಂಭ್ರಮದಿಂದ ಅವು ಮಿಮಿಗೆ ಹೇಳಿದವು.






ಅಲ್ಲಿ ಮಿಮಿಯಂತೆಯೇ ಕಾಣುವ ಎರಡು ಬನ್ನಿ ಮೊಲಗಳಿದ್ದವು, ಅವು ಬೂದು ಬಣ್ಣದಲ್ಲಿದ್ದವು.ಅವುಗಳಿಗೆ ಮೋಂಟಿ ಮತ್ತು ಬಂಟಿಯೆಂಬ ಹೆಸರು.

ತಮಾಷೆ ಮುಖಗಳನ್ನು ಮಾಡಿ ಇತರರನ್ನು ನಗಿಸುವುದೆಂದರೆ ಅವುಗಳಿಗೆ ಬಹಳ ಇಷ್ಟ.

"ನಮ್ಮೊಂದಿಗೆ ಇನ್ನೊಂದು ಮೊಲವಿರುವುದು ನಮಗೆ ಖುಷಿ ತಂದಿದೆ," ತಮಾಷೆ ಮುಖಗಳನ್ನು ಮಾಡುತ್ತಾ ಅವು ಮಿಮಿಗೆ ಹೇಳಿದವು.



ಅವರೆಲ್ಲರೂ ತುಂಬಾ ಮಂಚಗಳಿರುವ ಒಂದು ದೊಡ್ಡ ಕೋಣೆಯಲ್ಲಿ ಮಲಗುತ್ತಾರೆಂದು ಮಿಮಿಗೆ ತಿಳಿಯಿತು.ತನಗೆ ಟಿಂಗು ಜಿಂಕೆ ಹಾಗೂ ಸನ್ನಿ ಮತ್ತು ಫನ್ನಿ ಮೊಲಗಳ ಪಕ್ಕದ ಹಾಸಿಗೆಯಲ್ಲಿ ಜಾಗ ಸಿಕ್ಕಿತೆಂದು ಮಿಮಿಗೆ ಬಹಳ ಸಂತೋಷವಾಯಿತು. ಹೊಸ ಜಾಗದಲ್ಲಿ, ಹೊಸ ಹಾಸಿಗೆಯಲ್ಲಿ ಮಲಗುವುದು ತುಂಬಾ ಭಿನ್ನವಾಗಿದೆ ಎಂದು ಮಿಮಿ ಯೋಚಿಸಿದಳು. ತಾನು ಬಹುವಾಗಿ ನೆನೆಸಿಕೊಳ್ಳುವ ತನ್ನ ತಾಯಿಯೊಂದಿಗೆ ಮನೆಯಲ್ಲಿ ಇರಬಹುದಿತ್ತು ಎಂದು ಮಿಮಿಗೆ ಆಸೆಯಾಯಿತು.   "ಸಿಹಿಗನಸುಗಳು, ಮಿಮಿ!"ಎಂದು ಮೊಲಗಳು ಹೇಳಿದವು.

"ಹೆದರಬೇಡ ಮಿಮಿ, ನಾನು ನಿನ್ನ ಪಕ್ಕದಲ್ಲೇ ಇದ್ದೇನೆ," ಎಂದು ಟಿಂಗು ಹೇಳಿತು.

"ಎಲ್ಲರಿಗೂ ಶುಭರಾತ್ರಿ....ಚೆನ್ನಾಗಿ ನಿದ್ರೆ ಮಾಡಿ," ದೀಪಗಳನ್ನು ಆರಿಸುತ್ತಾ ಮಿಸೆಸ್ ಬೇರ್ ಹೇಳಿದಳು.

ಹೀಗೆ, ತನ್ನ ಸುದೀರ್ಘವಾದ ದಿನದಿಂದ ಬಹಳ ಆಯಾಸಗೊಂಡಿದ್ದ ಮಿಮಿ, ಗಾಢ ನಿದ್ರೆಗೆ ಜಾರಿದಳು.